Dr. R. NAGAN GOWDA.—The estimated production is obtained from the Statistical Department. ಹಿಂದೆ ಬೆಲ್ಲದ ಧಾರಣೆ ಕಡಮೆಯಾಗಿದ್ದಾಗ ಕೇಂದ್ರ ಸರ್ಕಾರದವರೇ ಬರೆದು ಬೆಲ್ಲವನ್ನು ಕಳುಹಿಸಿಕೊಡಿ ಎಂದು ಕೇಳಿದ್ದರು. ಅವರಿಂದ ಪರ್ಮಿಟ್ ಪಡೆದು ಆಗ ನಾವು ಎಕ್ಸ್‌ಪೋರ್ಟ್ ಮಾಡಿದ್ದೇವೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಮೊನ್ನೆತಾನೆ ತಾವು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ನಾವು ಯಾವ ಪದಾರ್ಥಗಳಿಗೂ ಪರ್ಮಿಟ್ ಕೊಡಲು ಕೇಂದ್ರಕ್ಕೆ ಶಿಫಾರ್ಸು ಮಾಡಿಲ್ಲ ಎಂದು ಹೇಳಿದ್ದೀರಿ. ಈಗ ಶಿಫಾರ್ಸು ಮಾಡಲಾಗಿತ್ತು ಎಂದು ಹೇಳುತ್ತಿದ್ದೀರಿ. ಈ ಎರಡರಲ್ಲಿ ಯಾವುದು ಸರಿ ?

ಅಧ್ಯಕ್ಷರು.—ಆ ದಿವಸ ಆಲೂಗೆಡ್ಡೆಯ ವಿಚಾರ ಮಾತ್ರ ಬಂದಿತ್ತು. ಈಗ ಅವರು ಬೆಲ್ಲದ ವಿಚಾರವಾಗಿ ಹೇಳಿದ್ದಾರೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಯಾವುದಕ್ಕೂ ನಾವು ಶಿಫಾರ್ಸು ಮಾಡಲಿಲ್ಲ ಎಂದು ಹೇಗೆ ಹೇಳಿದರು ?

ಡಾ॥ ಆರ್. ನಾಗನಗೌಡ.—ಆ ದಿವಸ ಈ ಬೆಲ್ಲದ ವಿಚಾರ ಬಂದಿರಲಿಲ್ಲ

Sri T. MARIAPPA.—In view of the large production of these two commodities—onions and potatoes—recently, have the Government of Mysore drawn the attention to the Government of India to the need for taking into consideration the quota available for Mysore for export ?

Dr. R. NAGAN GOWDA.—Yes, we have brought to the notice of the Government of India the need for creating facilities and giving some export quotas.

Sri T. MARIAPPA.—With regard to onions and groundnuts ?

Dr. R. NAGAN GOWDA.—I have already done it in the case of onions and jaggery; but, so far as grountnut is concerned, I think the Government of India is aware of the fact that there is an excess production of groundnut here and it depends upon the policy of the Government of India.

Short-term loans to raiyats.

Q.—627. **Sm. LAKSHMIDEVI RAMANNA** (Hoskote-Anekal).—

Will the Government be pleased to state :—

(*a*) the steps that have been taken to enable poor raiyats to get the benefit of the short-term loans intended for the welfare of the raiyats ;

(*b*) whether arrangements have been made in every Hobli headquarter to enable raiyats to draw this loan without any difficulty ?

A.—**Dr. R. NAGAN GOWDA** (Minister for Agriculture).—

(*a*) Four District Co-operative Central Banks including the one at Bellary are attending to sanction of short-term loans through the affiliated Societies.

Six more Banks are being organised in the remaining districts of Bangalore, Tumkur, Mysore, Chitaldrug, Chikmagalur and Kolar.

(*b*) Arrangements are made in the districts where District Co-operative Central Banks are working to disburse these short-term loans through the selected societies situated in Hoblis and Circle Headquarters.

The Apex Bank is dealing with Primary Societies similarly in the districts where there are no District Banks.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈ ಕೇಂದ್ರ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ಹೊರೆಯುವಂತೆ ಮಾಡಬೇಕಾಗಿದ್ದರೆ ಅವರೆಲ್ಲರೂ ಮೊದಲು ಆ ಸಂಘಗಳಿಗೆ ಸದಸ್ಯರಾದಮೇಲೆ ಅಲ್ಲವೇ ಅವರು ಸಾಲಕ್ಕೆ ಅರ್ಜಿ ಹಾಕಬೇಕಾದುದು ?

* ಡಾ॥ ಆರ್. ನಾಗನಗೌಡ.—ಆಯಾ ರೈತರಿಗೆ ಅವರ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಇಲ್ಲದಿದ್ದರೆ ಅವರು ಬೇರೆ ಜಿಲ್ಲೆಗಳಿಗೆ ಸಾಲಕ್ಕೆ ಅರ್ಜಿ ಹಾಕಬೇಕಾಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಆಯಾ ಸ್ಥಳದಲ್ಲೇ ಒಂದುವೇಳೆ ಈ ಸೊಸೈಟಿಗಳಿದ್ದರೆ ಈ ಸಾಲದ ಅರ್ಜಿಗಳನ್ನು ಆಯಾ ಸೊಸೈಟಿಯವರೇ ಮಂಜೂರು ಮಾಡುತ್ತಾರೋ ಅಥವಾ ಅವುಗಳನ್ನು ಜಿಲ್ಲಾ ಕನಬೆಗಳಲ್ಲರುವಂಥ ಸೊಸೈಟಿಗಳಿಗೆ ಮಂಜೂರಾತಿಗಾಗಿ ಕಳುಹಿಸಬೇಕೋ ?

ಡಾ॥ ಆರ್. ನಾಗನಗೌಡ.—ಮೊದಲು ಸ್ಥಳೀಯ ಸಹಕಾರ ಸಂಘದವರು ಸಾಲಕ್ಕೆ ಶಿಫಾರ್ಸು ಮಾಡುತ್ತಾರೆ. ಜಿಲ್ಲಾ ಕನಬೆಯಲ್ಲರುವ ಸಹಕಾರ ಸಂಘದವರು ಅದನ್ನು ಮಂಜೂರು ಮಾಡುತ್ತಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ನಾಲ್ಕು ಬ್ಯಾಂಕುಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಾಗಿ ಕೆಲಸ ಮಾಡುತ್ತಿವೆ ಎಂದು ಹೇಳುತ್ತೀರಿ. ಸಾಮಾನ್ಯ ರೈತ ಅರ್ಜಿ ಹಾಕಿದಮೇಲೆ ಎಷ್ಟು ಕಾಲದವರೆಗೆ ಈ ಹಣ ಅವನಿಗೆ ತಲುಪುತ್ತದೆ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—Actual figures ನಮ್ಮ ಹತ್ತಿರವಿಲ್ಲ. ಆದರೂ ನಾವು ಅವನಿಗೆ ಪೈರು ಬೆಳೆಸುವುದಕ್ಕೆ ಬೇಕಾದ ಸಮಯದಲ್ಲಿ ದುಡ್ಡು ಸಿಕ್ಕುವ ಹಾಗೆ ಏರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸ್ಥಳದಲ್ಲಿರ ತಕ್ಕಂಥ ಸೊಸೈಟಿಯವರು ಮಂಜೂರು ಮಾಡಬೇಕು. ಆಮೇಲೆ ಜಿಲ್ಲಾ ಬ್ಯಾಂಕು ಮಂಜೂರು ಮಾಡಬೇಕು.

ಇಷ್ಟಾದಮೇಲೆ ಅವನಿಗೆ ಹಣ ತಲಪುತ್ತದೆ. ಆದರೆ ಆತನ ಉಳುಮೆ ಕಾಲಕ್ಕೆ, ಆತನು ಗೊಬ್ಬರ ತೆಗೆದು ಕೊಳ್ಳುವುದಕ್ಕೆ, ಬಿತ್ತನೆ ಬೀಜ ಕೊಂಡುಕೊಳ್ಳುವುದಕ್ಕೆ ಹಣ ಸಿಕ್ಕುತ್ತಾ, ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅಂತಹ ನಂದರ್ಭಕ್ಕೂ ಏರ್ಪಾಡು ಮಾಡಿದ್ದೇವೆ. ಸೊಸೈಟಿಯವರು ಮಳೆ ಬರುವ ಹೊತ್ತಿಗೆ ಮುಂಚಿತವಾಗಿ ರೈತರಿಂದ ದರಖಾನ್ತು ತೆಗೆದುಕೊಂಡು ಅವರಿಗೆ ಎಷ್ಟು ಹಣ ಬೇಕಾಗುತ್ತದೋ ಅಷ್ಟನ್ನು ಪಾಸ್‌ಮಾಡಿ Central Bankನವರಿಗೆ ಕಳುಹಿಸಿಕೊಡುತ್ತಾರೆ. ಇದೆಲ್ಲಾ ಒಂದು routine ಕೆಲಸ. ಇದು ಸ್ವಲ್ಪ ಕಾಲದಲ್ಲಿಯೇ ಜರಗಿಹೋಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅಲ್ಪ ಕಾಲಾವಧಿ ಸಾಲಕ್ಕೆ ಶೇಕಡ ಎಷ್ಟು ಬಡ್ಡಿ ?

ಡಾ॥ ಆರ್. ನಾಗನಗೌಡ.—ಒಂದು ರೂಪಾಯಿಗೆ ಒಂದು ಪೈ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸುಮಾರು ಶೇಕಡ ಎಷ್ಟು ಬರುತ್ತದೆ?

ಡಾ॥ ಆರ್. ನಾಗನಗೌಡ.—ಶೇಕಡ $6\frac{1}{4}$.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ short-term loan ಇದುವರೆಗೆ ಎಷ್ಟು ಕೊಟ್ಟಿದ್ದೀರಿ?

ಡಾ॥ ಆರ್. ನಾಗನಗೌಡ.—Figures ಇಲ್ಲ. ಸಾಲಗಳನ್ನು ಕೊಟ್ಟು ಆಗಲೇ ವಸೂಲು ಸಹ ಮಾಡಿದ್ದೇವೆ. Exact figures ಹೇಳಲಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ವಸೂಲು ಎಷ್ಟು ಮಾಡಿದ್ದೀರಿ ಎಂದು ಹೇಳುವುದಕ್ಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ವಸೂಲಾಗಿದೆ ಎಂಬುದನ್ನು ನಿಗದಿಯಾಗಿ ಹೇಳಲಾರೆ.

ಶ್ರೀ ಬಿ. ಹುಚ್ಚೇಗೌಡ.—ರೈತರ ಸ್ವತ್ತನ್ನು ಒಂದೇ ನಲ ಆಧಾರ ಮಾಡಿಕೊಂಡು ಎಷ್ಟೆಷ್ಟು credit ಕೊಡಬೇಕೆಂಬುದನ್ನು ನಿಗದಿ ಮಾಡಿ ಅದೇ ಸೊಸೈಟಿಯಲ್ಲಿ ಸಾಲಗಳನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುವುದರಿಂದ ತಕ್ಷಣ ಕೇಳಿದ ಕೂಡಲೆ ಸಾಲ ಸಿಕ್ಕುವಹಾಗೆ ಏರ್ಪಾಡು ಆಗಿಲ್ಲವಲ್ಲವೇ ?

ಡಾ॥ ಆರ್. ನಾಗನಗೌಡ.—ಸಾಲ ಕೊಟ್ಟರೆ continuity bonds ಬರೆಸಿಕೊಂಡು ಒಂದೆರಡು ರೂಪಾಯಿ ಸಾಲವನ್ನು ಉಳಿಸಿ ಅದೇ ಬಾಂಡಿನಮೇಲೆ ಮುಂದಿನ ವರುಷ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

Village Shifting Scheme, Visvesvaraya Canal Area.

Q.—182. Sri K. SINGARI GOWDA (Nagamangala).—

Will the Government be pleased to state :—

(*a*) the amount spent in Visvesvaraya Canal Area for Village Shifting Scheme from its inception ;

(*b*) the number of villages shifted so far ?

A.—Sri Kadidal MANJAPPA (Minister for Revenue and Public Works).—

(*a*) Rs. 12,36,064-13-0.

(*b*) 50.

ಶ್ರೀ ಕೆ. ಸಿಂಗಾರಿಗೌಡ.—(*b*) ಪ್ರಶ್ನೆಗೆ ಉತ್ತರವಾಗಿ 50 ಗ್ರಾಮಗಳು ಬದಲಾವಣೆಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಅವು ವಾಸ್ತವವಾಗಿ shift ಆಗಿದ್ದ ಹಳ್ಳಿಗಳೇ ಅಥವಾ shift ಆಗಬೇಕಾದ ಹಳ್ಳಿಗಳೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವು shift ಆದ ಗ್ರಾಮಗಳು.

ಶ್ರೀ ಕೆ. ಸಿಂಗಾರಿಗೌಡ.—ಸರ್ಕಾರದ ಮೊಬಲಗು ಪಡೆದು shift ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಜಾಗಗಳಲ್ಲಿ ಹಾಗೆ ಮಾಡಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ಇವಕ್ಕೆ party ವೈಷಮ್ಯ ಮುಖ್ಯ ಕಾರಣವೇ?

ಶ್ರೀ ಕಡಿದಾಳ್ ಮಂಜಪ್ಪ.—ನಿಜ.

ಶ್ರೀ ಕೆ. ಸಿಂಗಾರಿಗೌಡ.—Village shifting ಕಡ್ಡಾಯವಾಗಿ ಈಗ ಮಾಡಬೇಕೆಂದು ಸಲಹೆ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಡ್ಡಾಯವಾಗಿ ಮಾಡಬೇಕು. ಆದರೆ ಕೆಲವು ನಂದರ್ಭಗಳಲ್ಲಿ ಬಹು ಜನರು ಹಳ್ಳಿಯಲ್ಲಿ shift ಮಾಡುವುದಕ್ಕೆ ಒಪ್ಪದೇ ಇದ್ದರೆ ಅವರನ್ನು ಬಲಾತ್ಕಾರ ಮಾಡುವುದು ಕಷ್ಟವಾಗುತ್ತದೆ. ಈ ಕಾರಣದಿಂದ ಸ್ವಲ್ಪ ತಡವಾಗುತ್ತದೆ.

ಶ್ರೀ ಕೆ. ಸಿಂಗಾರಿಗೌಡ.—ಅಧಿಕಾರ ಕೊಟ್ಟಿಲ್ಲ, ಅದನ್ನು ಕೊಡಬೇಕು ಎಂದು ನಂಬಂಧಪಟ್ಟ ಅಧಿಕಾರಿಗಳೂ, ಸ್ಥಳೀಯ ಮುಖಂಡರುಗಳೂ ಆಗಾಗ ತಿಳಿಸಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಗಿರತಕ್ಕ ಅಧಿಕಾರ ಸಾಕು ಎಂಬ ಭಾವನೆ ಇದೆ. ಇನ್ನೂ ಹೆಚ್ಚಿನ ಅಧಿಕಾರ ಬೇಕು ಎಂದರೆ ಅದನ್ನು ಪರಿಶೀಲನೆಮಾಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—Health Department ನವರು shift ಮಾಡಬೇಕೆಂದು ಹೇಳಿರುವ ಅನೇಕ ನಂದರ್ಭಗಳಲ್ಲಿ ಸರ್ಕಾರದ ತಡೆ ಆರ್ಡರ್ ಬಂದು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಗ್ರಾಮದಲ್ಲಿ ಈ ರೀತಿ ತಡೆ ಆರ್ಡರ್ ಕೊಟ್ಟಿರುವುದು ನನ್ನ ನೆನಪು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—Stay order ವರ್ಷಗಟ್ಟಲೆ ಆದರೂ ನಿಧಾನವಾಗಿ shift ಮಾಡುವುದಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ವರ್ಷವಾಗಿಲ್ಲ. ನನಗೆ ನೆನಪು ಇರುವಹಾಗೆ ಆರು ತಿಂಗಳು ಆಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹೆರ್ತ್ ಕಮಿಟಿಯವರು ಯಾವ ಜಾಗಕ್ಕೆ ಹೋಗಬೇಕೆಂದು ತೀರ್ಮಾನ ಮಾಡಿದ್ದಾರೋ ಆ ಜಾಗಕ್ಕೆ ಹೋಗದೆ ಪೊಂದು ಕಟ್ಟಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವುಕಡೆ ಹಾಗೆಯೇ ಆಗಿದೆ ಎಂಬುದು ಗಮನಕ್ಕೆ ಬಂದಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಬಲಾತ್ಕಾರ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.